**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**

**Spl.C.169/2024**

ದಿನಾಂಕ 21.11.2025
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

CW - 1 PW -1

| | | |
|---|---|---|
| ಹೆಸರು | ಃ | ಚಿಕ್ಕತಾಯಮ್ಮ |
| ಗಂಡನ ಹೆಸರು | ಃ | ಮಾದೇವಯ್ಯ |
| ವಯಸ್ಸು | ಃ | 55 ವರ್ಷ |
| ಉದ್ಯೋಗ | ಃ | ಪಿಲಚರಿ ಕೆಲಸ |
| ವಾಸಸ್ಥಳ | ಃ | 1ನೇ ವಾರ್ಡ್, ಅರ್ಕಾವತಿ ಬಡಾವಣೆ, ರಾಮನಗರ |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ 2 ಮತ್ತು 3 ನನ್ನ ಮಕ್ಕಳು. ಚಾಸಾ 4 ರಿಂದ 6 ನನಗೆ ಗೊತ್ತು. ನಾವು ಆದಿ ಕರ್ನಾಟಕ ಜಾತಿಗೆ ಸೇರಿದವರಾಗಿರುತ್ತೇವೆ. ನ್ಯಾಯಾಲಯದ ಮುಂದಿರುವಂತಹ ಆರೋಪಿ ನನಗೆ ಗೊತ್ತು. ಆತ ಆಚಾರಿ ಜಾತಿಗೆ ಸೇರಿದವನಾಗಿರುತ್ತಾನೆ. ಆತನಿಗೆ ನಾವು ಆದಿ ಕರ್ನಾಟಕ ಜಾತಿಗೆ ಸೇರಿದವರು ಎಂದು ಗೊತ್ತಿದೆ. ಆರೋಪಿ ನಮ್ಮ ಪಕ್ಕದ ಮನೆಯ ನಿವಾಸಿಯಾಗಿರುತ್ತಾನೆ. ಆತ ಅಲ್ಲಿ ವಾಸ ಮಾಡಲು ಪ್ರಾರಂಭಿಸಿ 25 ವರ್ಷವಾಗಿದೆ. ಮೊದಲು ಆರೋಪಿ ಹಳೆಯ ಮನೆಯಲ್ಲಿ ವಾಸ ಮಾಡುತ್ತಿದ್ದು, ಈಗ 8 ವರ್ಷದ ಹಿಂದೆ ಹಳೆಯ ಮನೆಯನ್ನು ಕಿತ್ತು ಅಲ್ಲಿಯೇ ಹೊಸ ಮನೆಯನ್ನು ಕಟ್ಟಿರುತ್ತಾರೆ. ನಮ್ಮ ಮನೆಯ ಗೋಡೆಗೆ ಲಗತ್ತಾಗಿ ಆರೋಪಿ ತನ್ನ ಮನೆ ಕಟ್ಟಿರುತ್ತಾನೆ. ಆತ ಹಳೆಯ ಮನೆಯನ್ನು ಕೆಡವುವ ದಿನ ನಾವು ಅಲ್ಲಿ ಇರಲಿಲ್ಲ. ಆತ ಜೆಸಿಬಿ ಯಿಂದ ಗೋಡೆ ಕೆಡವಿದ್ದರಿಂದ ನಮ್ಮ ಗೋಡೆ ಬಿದ್ದು ಹೋಯಿತು. ಆಗ ನಾನು ಆರೋಪಿಗೆ ಈ ರೀತಿ ನಮಗೆ ತೊಂದರೆಯಾಗಿದೆ ಎಂದು ಹೇಳಿದಾಗ

ನೀವು ಗೋಡೆ ಕಟ್ಟಿಸಿಕೊಳ್ಳಿ ನಾನು ಖರ್ಚು ಕೊಡುತ್ತೇನೆ ಎಂದು ಹೇಳಿದ್ದ. ರೂ.55,000/- ಖರ್ಚು ಮಾಡಿ ನಾನು ಗೋಡೆ ಕಟ್ಟಿಸಿಕೊಂಡೆ. ಆರೋಪಿ ಸದರಿ ಹಣ ಕೊಡಲಿಲ್ಲ. ಮನೆ ಕಟ್ಟುವ ಸಮಯದಲ್ಲಿ ನಮ್ಮ ಮನೆಯ ಶೀಟ್ ಮೇಲೆಲ್ಲಾ ಓಡಾಡಿ ಮನೆಯ ಮೇಲಿನ ಶೀಟ್ ಗಳು ಹೊಡೆದು ಹೋಗಿರುತ್ತವೆ. ಆ ಕಾರಣ ಮಳೆಯ ನೀರು ಒಳಗೆ ಬರುತ್ತಿತ್ತು. ಇದನ್ನು ಸಹ ಆರೋಪಿಗೆ ತಿಳಿಸಿದಾಗ ಟಾರ್ ಶೀಟ್ ಹಾಕಿಕೊಳ್ಳಿ ಎಂದು ಹೇಳಿದ. ರೂ.4,000/- ಖರ್ಚು ಮಾಡಿ ಟಾರ್ ಶೀಟ್ ಹಾಕಿದ್ದರೂ ಸಹ ಅದು ಸರಿ ಹೋಗದೇ ಮಳೆ ಬಂದರೆ ನೀರು ಸುರಿಯುತ್ತಿತ್ತು. ಸದರಿ ರೂ.4,000/- ಸಹ ಆರೋಪಿ ಕೊಡಲಿಲ್ಲ. ಆರೋಪಿಯನ್ನು ಕೇಳಿ ಕೇಳಿ ಸುಸ್ತಾಯಿತು. ನಮ್ಮ ಮನೆಯ ಗೋಡೆ ಬೀಳುವಂತೆ ಆಗಿದೆ. ಊರಿನ ಮುಖಂಡರನ್ನು ಕರೆದುಕೊಂಡು ಬಂದ ಸಹ ಆರೋಪಿಗೆ ಹೇಳಿಸಿದೆ. ಆತ ಆಗ ಒಪ್ಪಿಕೊಂಡರೂ ಸಹ ನಂತರ ಏನೂ ಸರಿ ಮಾಡಿಸಿ ಕೊಡಲಿಲ್ಲ. ಮನೆಯ ಬಾಗಿಲಿಗೆ ನೀರು ಹಾಕಿ ತೊಳೆದಾಗ ಆ ನೀರು ಆರೋಪಿಯ ಮನೆಯ ಕಡೆ ಹೋಗುತ್ತದೆ, ಅದು ತಮಗೆ ಮೈಲಿಗೆ ಆಗುತ್ತದೆ ಎಂದು ಜಾತಿ ಹೆಸರು ಹೇಳಿ ಬೈಯ್ಯುತ್ತಿದ್ದ.

2. ಕಳೆದ ವರ್ಷ ಭೀಮನ ಆಮಾವಷ್ಯೆಯಂದು ಮನೆಯ ಮುಂದಿರುವಂತಹ ಎಕ್ಕದ ಗಿಡಕ್ಕೆ ಪೂಜೆ ಮಾಡಿ ಬೆಲ್ಲದನ್ನ ನೈವೇದ್ಯ ಇಟ್ಟಿದ್ದೆ. ಅದನ್ನು ಆರೋಪಿ ತಪ್ಪಾಗಿ ತಿಳಿದು ಜಾತಿ ಹೆಸರು ಹೇಳಿ ಅಮ್ಮನಾಕ್ಕೆ ಅನ್ನದಲ್ಲಿ ಮಾಡಿಸಿ ಮಡಗಿದ್ದಾಳೆ, ಅಮ್ಮನ ಹೊಲೆಯರ ಜಾತಿನಾಕೆಯ, ಸಾಬ್ರು ಮನೆ ಕೂಲಿಗೆ ಹೋಗೋಳು, ನಿನಗೆ ಇಷ್ಟಿದ್ದರೇ ಲಕ್ಷ ಲಕ್ಷ ಸಂಬಳ ತೆಗೆದುಕೊಳ್ಳುವ ನನಗೆ ಎಷ್ಟಿರಬಹುದು, ನಿನ್ನನ್ನು ಇಲ್ಲಿಂದ ಓಡಿಸಿಯೇ ಓಡಿಸುತ್ತೇನೆ ಎಂದು ಹೇಳಿದ. ಹೊಗದೇ ಇದ್ದರೇ ನನಗೆ ಓಡಿಸಲು ಗೊತ್ತು, ಏನು ಮಾಡಲು ಆಗುವುದಿಲ್ಲ ಎಂದು ಹೇಳಿದ. ನಾನು ದೂರಿನಲ್ಲಿ ನನಗೆ ರೂ.4 ಲಕ್ಷ ನಷ್ಟವಾಗಿದೆ ಎಂದು ಹೇಳಿಕೊಂಡಿದ್ದೇನೆ.

3. ಆತನ ಹಿಂಸೆಯನ್ನು ತಡೆದುಕೊಂಡು ಬಂದು ಅದು ಅತಿಯಾದಾಗ ಠಾಣೆಗೆ ಹೋಗಿ ದೂರು ಕೊಡಲು ಹೋದೆ. ಅವರು ನನ್ನ ದೂರು ತೆಗೆದುಕೊಳ್ಳಲಿಲ್ಲ. ನಂತರ ನಾನು ಎಸ್‌ಪಿ ಕಛೇರಿಯಲ್ಲಿ 9ನೇ ತಿಂಗಳಲ್ಲಿ ಅಂದರೆ ಭೀಮನ ಅಮಾವಾಷ್ಯೆ ಆದ ಒಂದು ತಿಂಗಳ ನಂತರ ದೂರು ಕೊಟ್ಟೆ. ಸದರಿ ದೂರುನ್ನು ನೋಡಿದರೆ ಗುರುತಿಸಬಲ್ಲೆ. ಅದಕ್ಕೆ ನಾನು ನನ್ನ ಎಡಗೈ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತೇನೆ. ದೂರನ್ನು ನಿಶಾನೆ ಪಿ 1 ಎಂದು ಗುರುತಿಸಲಾಯಿತು.

4. ದೂರು ಕೊಟ್ಟ ಮಾರನೇ ದಿನ ಪೊಲೀಸರು ಬೆಳಿಗ್ಗೆ 11 ಗಂಟೆಯ ಸಮಯದಲ್ಲಿ ಮನೆಯ ಹತ್ತಿರ ಬಂದಿದ್ದು, ಆಗ ನಾನು ಜಾಗ ತೋರಿಸಿರುತ್ತೇನೆ. ಸದರಿ ಸ್ಥಳದಲ್ಲಿ ಪೊಲೀಸರು ಬರವಣಿಗೆ ಮಾಡಿಕೊಂಡು ಫೋಟೋ ತೆಗೆದಿರುತ್ತಾರೆ. ಸದರಿ ಬರವಣಿಗೆಗೆ ನಾನು ಹೆಬ್ಬೆಟ್ಟು ಹಾಕಿರುತ್ತೇನೆ. ಸ್ಥಳ ಮಹಜರ್ ನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ 2 ಎಂದು ಗುರುತಿಸಲಾಯಿತು. ಫೋಟೋಗಳನ್ನು ಸಹ ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಗುರುತಿಸಿರುವ ಎರಡು ಫೋಟೋಗಳನ್ನು ನಿಶಾನೆ ಪಿ 3 ಮತ್ತು 4 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀಮತಿ.ಎ.ಎಸ್.ಸಿ., ವಕೀಲರಿಂದ ಆರೋಪಿ ಪರವಾಗಿಃ**

5. ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ಆರೋಪಿ ನಮ್ಮ ಮನೆಯ ಬಳಿ 25 ವರ್ಷಗಳಿಂದ ವಾಸ ಮಾಡಿಕೊಂಡಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಮೂಲತಃ ಆನೇಕಲ್ ನವನಾಗಿದ್ದು, ಆತ 2017 ರಲ್ಲಿ ಹಳೆಯ ಮನೆಯನ್ನು ಖರೀದಿ ಮಾಡಿದ್ದಾನೆ ಎಂದರೆ ಸರಿ. ಸಾಕ್ಷಿ ಸ್ವಯಂ ಹೇಳುತ್ತಾರೆ ಆದರೆ ಆತ ಹಳೆಯ ಮನೆಯಲ್ಲೇ ವಾಸವಿದ್ದ. ಈಗ 8-9 ವರ್ಷಗಳಿಂದ ಮಾತ್ರ ಆರೋಪಿ ರಾಮನಗರದಲ್ಲಿ ವಾಸಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಹಳೆಯ ಮನೆಯನ್ನು

ಬೀಳಿಸುವಾಗ ನನ್ನ ಗೋಡೆ ಬಿದ್ದಿತ್ತು ಎಂಬುವುದರ ಸಲುವಾಗಿ ನಾನು ನಗರಸಭೆಗಾಗಲೀ ಪೋಲೀಸರಿಗಾಗಲೀ ಯಾವುದೇದೂರು ಕೊಟ್ಟಿಲ್ಲ. ನಾನು ಈಗಲೂ ಸಹ ಅದೇ ಮನೆಯಲ್ಲಿ ವಾಸ ಮಾಡುತ್ತಿದ್ದೇನೆ. ನನ್ನ ಸೊಸೆ ಮತ್ತು ಮಗ ಪಕ್ಕದ ಮನೆಯಲ್ಲಿ ಬೇರೆಯೇ ವಾಸ ಮಾಡುತ್ತಿದ್ದಾರೆ.

6. ನಿಶಾನೆ ಪಿ 1 ದೂರನ್ನು ಯಾರು ಎಲ್ಲಿ ಯಾವಾಗ ಬರೆದುಕೊಟ್ಟರು ಎಂಬ ಪ್ರಶ್ನೆಗೆ ಸಾಕ್ಷಿ ಇದನ್ನು ನಮ್ಮ ಸಂಘಟಿಕರು ಬರೆದುಕೊಟ್ಟಿದ್ದಾರೆ ಎಂದು ಉತ್ತರಿಸಿರುತ್ತಾರೆ. ನಾನು ಮೊದಲು ಕೊಟ್ಟಂತಹ ದೂರನ್ನು ಪೊಲೀಸರು ಸ್ವೀಕರಿಸಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಹಿಂದೆ ಕೊಟ್ಟಂತಹ ದೂರಿಗೆ ಸಂಬಂಧಿಸಿದಂತೆ ಪೊಲೀಸರು ಎನ್‌ಸಿಆರ್ 197/2024 ನ್ನು ದಾಖಲು ಮಾಡಿಕೊಂಡಿದ್ದು, ಅದರಲ್ಲಿ ನಾನು ಜಾತಿ ನಿಂದನೆ ಬಗ್ಗೆ ಯಾವುದೇ ವಿಚಾರ ಹೇಳಿಲ್ಲ ಎಂದರೆ ಸರಿಯಲ್ಲ. ನಾನು ಈ ಹಿಂದೆ ನೀಡಿದಂತಹ ದೂರಿಗೆ ಪೊಲೀಸರು ಎನ್‌ಸಿಆರ್ ನೀಡಿರುತ್ತಾರೆ ಎಂದರೆ ಸಾಕ್ಷಿ ಖಾಲಿ ಹಾಳೆಗೆ ನನ್ನ ಹೆಬ್ಬೆಟ್ಟನ್ನು ಪಡೆದಿರುತ್ತಾರೆ ಎಂದು ಸಾಕ್ಷಿ ಉತ್ತರಿಸಿರುತ್ತಾರೆ. ಪೊಲೀಸ್ ಠಾಣೆಯಲ್ಲಿ ಯಾವುದೇ ಖಾಲಿ ಹಾಳೆಗೆ ಸಹಿ ಪಡೆಯುವುದಿಲ್ಲ ಆ ರೀತಿ ಇದ್ದರೇ ನೀವೇ ಅವರನ್ನು ಯಾತಕ್ಕಾಗಿ ಖಾಲಿ ಹಾಳೆಯಲ್ಲಿ ಹೆಬ್ಬೆಟ್ಟಿನ ಗುರುತು ಹಾಕಬೇಕು ಎಂದು ಕೇಳಬೇಕಿತ್ತು ಎಂದರೆ ಸಾಕ್ಷಿ ನನಗೆ ಹಿಂಸೆ ಮಾಡಿ ಹಾಕಿಸಿಕೊಂಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ನಾವು ಒಬ್ಬರಿಗೊಬ್ಬರು ಸಹಾಯ ಮಾಡುತ್ತಿದ್ದು, ನನಗೆ ಕಷ್ಟ ಇದ್ದಂತಹ ಸಮಯದಲ್ಲಿ ಆರೋಪಿಯಿಂದ ರೂ.20,000/- ಹಣ ಪಡೆದಿದ್ದು, ಸದರಿ ಹಣ ಆರೋಪಿ ವಾಪಸ್ಸು ಮಾಡುವಂತೆ ಕೇಳಿದಾಗ ಜಗಳ ನಡೆದಿದ್ದು, ಸದರಿ ವಿಚಾರಕ್ಕೆ ಸಂಬಂಧಿಸಿದಂತೆ ಪೊಲೀಸ್ ಠಾಣೆಗೆ ನಾನು ದೂರು ಕೊಟ್ಟಂತಹ ಸಮಯದಲ್ಲಿ ಆ ಬಗ್ಗೆ ವಿಚಾರಣೆ ಮಾಡಿ ನಾವು ಅಕ್ಕಪಕ್ಕ

ಮನೆಯವರಾಗಿರುವ ಕಾರಣ ನಮಗೆ ಸಮಾಧಾನವನ್ನು ಹೇಳಿ ರಾಜೀ ಮಾಡಿ ಕಳುಹಿಸಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನೀವು ಮೊದಲು ಕೊಟ್ಟಂತಹ ದೂರಿಗೆ ಸರ್ಕಾರದಿಂದ ಯಾವುದೇ ಹಣ ಬಂದಿಲ್ಲ ಎಂದರೆ ಸಾಕ್ಷಿ ನೀವೇ ಹೇಳಿ ಎಂದು ಉತ್ತರಿಸಿರುತ್ತಾರೆ. ಮತ್ತೆ ಪುನಃ ನಾನು ಜಾತಿ ನಿಂದನೆಯ ವಿಚಾರವನ್ನು ಹೇಳಿ ನಮ್ಮ ಸಂಘಟಕರ ಮೂಲಕ ದೂರು ಕೊಟ್ಟಾಗ ನಮಗೆ ಪರಿಹಾರದ ಹಣ ಬಂತು ಎಂದರೆ ಸರಿ.

7. ನಾನು ವಾಸವಿರುವ ಮನೆಯ ಮೇಲೆ ತೆಂಗಿನ ಕಾಯಿಯ ಸಿಪ್ಪೆ ಹಾಕಿಕೊಂಡಿದ್ದೇನೆ ಎಂದರೆ ಸರಿ. ಸದರಿ ಕಾಯಿ ಸಿಪ್ಪೆ ತೆಗೆಯಲು ಹೋಗಿ ನಮ್ಮ ಮನೆಯ ಶೀಟ್ ಹೊಡೆದಿರುತ್ತದೆ ಎಂದರೆ ಸರಿಯಲ್ಲ. ನೀವು ನಿಮ್ಮ ದೂರಿನಲ್ಲಿ ಹೇಳಿಕೊಂಡಿರುವ ಪ್ಲಾಸ್ಟಿಕ್ ಲೋಟಗಳು ಪ್ಲೇಟುಗಳು ಪಾನ್ ಪರಾಗ್ ಅಗಿದು ಉಗಿದಿರುವುದು, ಕೊಳೆತ ತರಕಾರಿ ಹಣ್ಣುಗಳನ್ನು ಎಸೆದಿರುವುದು ನಿಶಾನೆ ಪಿ 4 ಫೋಟೋದಲ್ಲಿ ಕಾಣಿಸುವುದಿಲ್ಲ ಎಂದರೆ ಸಾಕ್ಷಿ ನನ್ನ ಮಗ ಅದನ್ನು ಗುಡಿಸಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ದೂರಿನಲ್ಲಿ ಹೇಳಿರುವ ವಿಚಾರವೆಲ್ಲಾ ಸುಳ್ಳು ಎಂದರೆ ಸರಿಯಲ್ಲ. ಈಗ ನನಗೆ ತೋರಿಸಿರುವಂತಹ ಫೋಟೋದಲ್ಲಿ ನನ್ನ ಮನೆ ಮತ್ತು ಆರೋಪಿಯ ಮನೆ ಕಾಣಿಸುತ್ತದೆ ಎಂದರೆ ಸರಿ. ಸಾಕ್ಷಿ ಒಪ್ಪಿಕೊಂಡಿರುವಂತಹ ಫೋಟೋವನ್ನು ನಿಶಾನೆ ಡಿ 1 ಎಂದು ಗುರುತಿಸಲಾಯಿತು. ನಮ್ಮ ಮಹಡಿಗೆ ಮುಖವಾಗಿ ಆರೋಪಿಯ ಮನೆಯ ಕಿಟಕಿ ಇಲ್ಲ ಎಂದರೆ ಸರಿ. ಸಾಕ್ಷಿ ಸ್ವಯಂ ಹೇಳುತ್ತಾರೆ ಅಲ್ಲಿ ಒಂದು ಅಡ್ಡಗೋಡೆ ಇದೆ ಎಂದು ಉತ್ತರಿಸಿರುತ್ತಾರೆ. ಆರೋಪಿಯ ಮನೆ ಡ್ಯುಪ್ಲೆಕ್ಸ್ ಮನೆಯಾಗಿದ್ದು, ಮೂರನೇ ಅಂತಸ್ತಿನಿಂದ ಕಸ ಎಸೆಯಲು ಆಗುವುದಿಲ್ಲ, ಆದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ನನಗೆ ತೋರಿಸಿರುವಂತಹ ಫೋಟೋದಲ್ಲಿ ನಾನು ಹೇಳಿರುವಂತಹ ಎಕ್ಕದ ಗಿಡ ಕಾಣಿಸುತ್ತದೆ ಎಂದರೆ ಸರಿ. ಸದರಿ ಫೋಟೋವನ್ನು ಸಾಕ್ಷಿ ಒಪ್ಪಿಕೊಂಡಿರುವ

ಕಾರಣ ನಿಶಾನೆ ಡಿ 2 ಎಂದು ಗುರುತಿಸಲಾಯಿತು. ನಿಶಾನೆ ಡಿ 2 ರಲ್ಲಿ ಕಾಣುವ ಎಕ್ಕದ ಗಿಡದ ಬುಡದಲ್ಲಿ ಏನಾದರೂ ಇಟ್ಟರೇ ಅದು ಆರೋಪಿಯ ಮನೆಯ ಬಾಗಿಲಿನ ವರೆಗೆ ಹೋಗಲು ಯಾವುದೇ ಸಾಧ್ಯತೆ ಇಲ್ಲ ಎಂದರೆ ಸರಿಯಲ್ಲ. ಆರೋಪಿ ಮೂಕ್ಕಾಲು ಗಂಟೆ ನನ್ನನ್ನು ಜಾತಿ ನಿಂದನೆ ಮಾಡಿ ಅವಾಚ್ಯ ಶಬ್ಧಗಳಿಂದ ಬೈದಿದ್ದಾನೆ ಎಂದು ನಾನು ನನ್ನ ದೂರಿನಲ್ಲಿ ಹೇಳಿಕೊಂಡಿಲ್ಲ ಎಂದರೆ ಸರಿಯಲ್ಲ. ಈಗ ನನಗೆ ತೋರಿಸಿದಂತಹ ಫೋಟೋದಲ್ಲಿ ನನ್ನ ಮನೆಯ ಗೋಡೆ ಕಾಣಿಸುತ್ತದೆ ಎಂದರೆ ಸರಿ. ಸದರಿ ಫೋಟೋವನ್ನು ಸಾಕ್ಷಿ ಒಪ್ಪಿಕೊಂಡಿರುವ ಕಾರಣ ನಿಶಾನೆ ಡಿ 3 ಎಂದು ಗುರುತಿಸಲಾಯಿತು. ಸದರಿ ಫೋಟೋದಲ್ಲಿ ನನ್ನ ಮನೆಯ ಗೋಡೆ ಬಿದ್ದಿರುವ ಯಾವುದೇ ಕುರುಹು ಇಲ್ಲ ಎಂದರೆ ಸಾಕ್ಷಿ ಫೋಟೋದಲ್ಲಿ ನಾನು ಪ್ಲಾಸ್ಟರಿಂಗ್ ಮಾಡಿಸಿರುವುದು ಕಾಣಿಸುತ್ತದೆ ಎಂದು ಉತ್ತರಿಸಿರುತ್ತಾರೆ. ನನ್ನ ಗೋಡೆ ಬಿದ್ದಿರುವ ಬಗ್ಗೆ ನಾನು ಯಾವುದೇ ಫೋಟೋ ತೆಗೆಸಿರಲಿಲ್ಲ. ಆರೋಪಿ ತನ್ನ ಮನೆಯ ಗೋಡೆ ತೆಗೆಸುವಾಗ ನನ್ನ ಮನೆಯ ಗೋಡೆಗೆ ಯಾವುದೇ ಜಖಂ ಆಗಿರುವುದಿಲ್ಲ, ನಿಶಾನೆ ಡಿ 3 ಫೋಟೋದಲ್ಲಿ ನನ್ನ ಮನೆಯ ಗೋಡೆ ಮೊದಲು ಹೇಗಿತ್ತೋ ಅದೇ ರೀತಿಯಲ್ಲಿ ಇರುವುದು ಕಾಣಿಸುತ್ತಿದ್ದು, ನನಗೆ ಯಾವುದೇ ನಷ್ಟ ಮತ್ತು ತೊಂದರೆ ಆಗದೇ ಇದ್ದರೂ ಸಹ ಪರಿಹಾರ ಸಿಗುತ್ತದೆ ಎಂಬ ಕಾರಣದಿಂದ ಜಾತಿ ನಿಂದನೆ ಮಾಡಲಾಗಿದೆ ಎಂದು ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

8. ಚಾಸಾ 2 ಮತ್ತು 3 ನನ್ನ ಮಕ್ಕಳಾಗಿದ್ದು, ಚಾಸಾ 4 ಮತ್ತು 5 ನನ್ನ ಸಂಬಂಧಿಕರಾಗಿರುವ ಕಾರಣ ನನಗೆ ಅನುಕೂಲವಾಗುವ ರೀತಿಯಲ್ಲಿ ಅವರನ್ನು ಸಾಕ್ಷಿಯನ್ನಾಗಿ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ.ಆರೋಪಿ ನನ್ನ ಮನೆಯ ಗೋಡೆಯನ್ನು ಉರುಳಿಸಿಲ್ಲ, ನನಗೆ ಯಾವುದೇ ನಷ್ಟವಾಗಿರುವುದಿಲ್ಲ, ಆರೋಪಿ ನನಗೆ ಗೋಡೆ ಕಟ್ಟಿಸಿಕೊಳ್ಳಿ ನಾನು ಅದರ

ಖರ್ಚು ಕೊಡುತ್ತೇನೆ ಎಂದು ಹೇಳಿರುವುದಿಲ್ಲ, ನ್ಯಾಯ ಪಂಚಾಯಿತಿ ಯಾವುದೇ ರೀತಿಯಲ್ಲಿ ನಡೆದಿಲ್ಲ, ನನಗೆ ಯಾವುದೇ ರೀತಿಯಲ್ಲಿ ಆರೋಪಿ ಅವಾಚ್ಯ ಶಬ್ಧಗಳಿಂದ ಬೈದು ನಿಂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಜಾತಿ ನಿಂದನೆಯ ದೂರು ನೀಡಿದರೆ ಸರ್ಕಾರದಿಂದ ಪರಿಹಾರದ ಹಣ ಬರುತ್ತದೆ ಎಂಬ ಕಾರಣದಿಂದ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ನಡುವೆ ಅನ್ಯೋನ್ಯತೆ ಇದ್ದು, ಹಣಕಾಸಿನ ವಿಚಾರದ ಸಲುವಾಗಿ ತಕರಾರು ಬಂದಾಗ ನಾನು ಆತನ ವಿರುದ್ಧ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸರು ಸ್ಥಳಕ್ಕೆ ಬಂದಿಲ್ಲ, ಅಲ್ಲಿ ಯಾವುದೇ ಮಹಜರ್ ಮಾಡಿಲ್ಲ, ನಾನು ನಿಶಾನೆ ಪಿ 2 ಕ್ಕೆ ಪೊಲೀಸ್ ಠಾಣೆಯಲ್ಲಿ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಪಂಚಾಕ್ಷರಿ.ಎಂ.)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.